ಬಾರಿ ಮುಖ್ಯಮಂತ್ರಿಯವರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಇಲ್ಲಿ ಈ ರೀತಿ ಘಟನೆಗಳು ನಡೆಯುವಂಥ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಪ್ರಸ್ತಾಪ ಮಾಡಿ ಮುಖ್ಯಮಂತ್ರಿಗಳಿಂದ ನೇರವಾಗಿ ಅಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯದರ್ಶಿಯವರ ಮೂಲಕ ಸುತ್ತೋಲೆಯನ್ನು ಕಳಿಸಿಕೊಡುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಉಪಾಧ್ಯಕ್ಷರೆ, ಮೊದಲು ಸಚಿವರು ಶಿಸ್ತನ್ನು ಕಲಿತುಕೊಳ್ಳಬೇಕು. ಎಂ.ಎಲ್.ಎ.ಗಳು ಅಧ್ಯಕ್ಷತೆ ಇಲ್ಲದಿರುವ ಸಮಾರಂಭಕ್ಕೆ ಯಾವುದೇ ಮಂತ್ರಿಗಳು ಭಾಗವಹಿಸದಿರುವ ತೀರ್ಮಾನವನ್ನು ತೆಗೆದುಕೊಳ್ಳಬೇಕು. ನಿಮ್ಮ ಬಗ್ಗೆ ನೀವೇ ಶಿಸ್ತನ್ನು ಹೇರಿಕೊಂಡರೆ ಸರಿಯಾಗುತ್ತದೆ.

ಉಪಾಧ್ಯಕ್ಷರು: ಈ ವಿಷಯದ ಬಗ್ಗೆ ಈಗಾಗಲೇ ಎರಡುಮೂರು ಸಲ ಸದನದಲ್ಲಿ ಚರ್ಚೆಯಾಗಿದೆ. ಈಗ ತಾನೇ ಮಾನ್ಯ ಪ್ರಕಾಶ್‌ರವರು ಸರ್ಕಾರದ ಪರವಾಗಿ ಸ್ಪಷ್ಟವಾದ ಉತ್ತರ ಕೊಟ್ಟಿದ್ದಾರೆ. ಇನ್ನೊಮ್ಮೆ ಈ ರೀತಿ ಆಗದಂತೆ ಎಚ್ಚರಿಕೆಯನ್ನು ವಹಿಸುವುದಾಗಿ ಹೇಳಿದ್ದಾರೆ. ನಾವೂ ಕೂಡ ಯಾವುದೇ ಶಾಸಕರಿಗೆ ಅಲಕ್ಷ್ಯ ಮಾಡದಂತೆ ಪ್ರತಿಯೊಂದು ಕಾರ್ಯಕ್ರಮದಲ್ಲಿ ಸುತ್ತೋಲೆಯ ಪ್ರಕಾರ ನಡೆದುಕೊಳ್ಳಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿಗೆ ಈ ವಿಚಾರ ಮುಕ್ತಾಯ ಮಾಡೋಣ.

ನಿನ್ನೆ ಶೂನ್ಯ ವೇಳೆಯಲ್ಲಿ ಪ್ರತಾಪಚಂದ್ರ ಶೆಟ್ಟಿಯವರು ಎತ್ತಿದೆ ವಿಚಾರದ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗಿದೆ. ಅದನ್ನು ಸಮಾಜಕಲ್ಯಾಣ ಸಚಿವರು ಮಾಡುತ್ತಾರೆ.

ಸಚಿವರ ಹೇಳಿಕೆ

ವಿಷಯ: ಕುಂದಾಪುರದ ಗಿರಿಜನ ಆಶ್ರಮ ಶಾಲೆಯಲ್ಲಿ ಅತ್ಯಾಚಾರ ನಡೆದಿದೆ ಎಂಬ ಆಪಾದನೆ ಬಗ್ಗೆ

+ ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜಕಲ್ಯಾಣ ಸಚಿವರು): ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರು ದಿನಾಂಕ: 19-8-97ರ ತಮ್ಮ ಟಿಪ್ಪಣಿಯಲ್ಲಿ ಗಿರಿಜನ ಆಶ್ರಮ ಶಾಲೆ, ಕುಂದಾಪುರದಲ್ಲಿ 4ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ ಕುಮಾರಿ ವಿಶಾಲ ಎಂಬುವವರ ಮೇಲೆ ಅದೇ ಸಂಸ್ಥೆಯ ಅಡಿಗೆಯವರಾದ ಶ್ರೀಮತಿ ಕೆ.ಎಂ.ಸುಶೀಲರವರ ಪತಿ ಶ್ರೀ ನಾರಾಯಣ ಎಂಬುವವರು ಎಸಗಿದ್ದರು ಎನ್ನಲಾದ ಅತ್ಯಾಚಾರ ಕುರಿತಂತೆ ದಿನಾಂಕ: 19-8-97ರಂದು ಕುಂದಾಪುರ ತಾಲ್ಲೂಕಿಗೆ ಭೇಟಿ ನೀಡಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕುಮಾರಿ ವಿಶಾಲ ಹಾಗೂ ಅವರ ತಾಯಿ ಶ್ರೀಮತಿ ರತ್ನ ಇವರನ್ನು ಭೇಟಿ ಮಾಡಿ, ಹಾಗೂ ಸ್ಥಳೀಯ

ಕುಂದಾಪುರ ಪೋಲೀಸ್ (ಪೋಲಿಸ್ ವೃತ್ತ ನಿರೀಕ್ಷಕರು) ಇವರೊಡನೆ ಚರ್ಚಿಸಿ ತಮ್ಮ ವರದಿ ತಿಳಿಸಿರುತ್ತಾರೆ.

ಸದರಿಯವರ ವರದಿಯಲ್ಲಿ ಕಂಡುಬರುವ ಅಂಶವೆಂದರೆ, ಕುಮಾರಿ ವಿಶಾಲ 4ನೇ ತರಗತಿಯ ವಿದ್ಯಾರ್ಥಿನಿ ಆಗಿದ್ದು, ಮೂಲತಃ ಕುಂದಾಪುರ ತಾಲ್ಲೂಕಿನ ಕೆರಾಡಿ ಗ್ರಾಮದ ಕಂಚಿನಬೇರು ಪ್ರದೇಶದ ಗಿರಿಜನ ಕುಟುಂಬಕ್ಕೆ ಸೇರಿದವರಾಗಿರುತ್ತಾರೆ. ಪ್ರಕರಣದ ಕೇಂದ್ರ ಬಿಂದುವಾದ ವಿದ್ಯಾರ್ಥಿನಿ ಕುಮಾರಿ ವಿಶಾಲ ಎಂಬುವವರು ದಿನಾಂಕ:3-8-97ರಂದು ಋತುಮತಿಯಾಗಿರುವುದಾಗಿ ಸ್ಥಳೀಯ ಸಿಬ್ಬಂದಿ ವರ್ಗದವರಿಂದ ವಿದ್ಯಾರ್ಥಿನಿಯ ಮನೆಯವರಿಗೆ ತಿಳಿದ ಮೇರೆಗೆ ಆಕೆಯ ಅಣ್ಣ ದಿನಾಂಕ:9-8-97ರಂದು ರಾತ್ರಿ 8-00 ಘಂಟೆಗೆ ಮನೆಗೆ ಕರೆದುಕೊಂಡು ಹೋಗುವುದಾಗಿಯೂ, ಆಕೆಯ ಶರೀರದಲ್ಲಿ ರಕ್ತಸ್ರಾವ ಆಗುತ್ತಿರುವುದನ್ನು ಗಮನಿಸಿ, ಅದಕ್ಕೆ ಕಾರಣ ಏನು ಎಂಬುದನ್ನು ಆಕೆಯಿಂದ ಗ್ರಹಿಸಲಾಗದಿದ್ದ ಕಾರಣ, ದಿನಾಂಕ: 11-8-97ರ ಬೆಳಗಿನವರೆಗೂ ರಕ್ತ ಸ್ರಾವ ನಿಲ್ಲದ ಕಾರಣ ವಿಷಯವನ್ನು ಕುಂದಾಪುರ ಆಶ್ರಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ತಿಳಿಸಿ, ತರುವಾಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ವೈದ್ಯಕೀಯ ತಪಾಸಣೆಯಲ್ಲಿ ಮಹಿಳಾ ವೈದ್ಯರು ಇದು ಹುಡುಗಿ ವಯಸ್ಸಿಗೆ ಬಂದ ಪ್ರಕರಣ ಅಲ್ಲವೆಂದೂ, ಇದು ಬಲಾತ್ಕಾರವೆಂದು ಶಂಕೆ ವ್ಯಕ್ತಪಡಿಸಿದ ಮೇರೆಗೆ ವಿದ್ಯಾರ್ಥಿನಿಯನ್ನು ವಿಚಾರಿಸಿದಾಗ, ಕುಮಾರಿ ವಿಶಾಲ ಶ್ರೀಮತಿ ಸುಶೀಲರವರ ಪತಿ ಶ್ರೀ ನಾರಾಯಣ ಎಂಬುವವರು ತನ್ನ ಮೇಲೆ ಅತ್ಯಾಚಾರ ಮಾಡಿರುತ್ತಾರೆಂದು ಮಹಿಳಾ ವೈದ್ಯರಿಗೆ ಮಾತ್ರ ತಿಳಿಸಿರುತ್ತಾರೆ. ಈ ಬಗ್ಗೆ ಹುಡುಗಿಯು ಸಮರ್ಥಿಸುತ್ತಿದೆ.

ತರುವಾಯ ಕುಂದಾಪುರ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ನೀಡಿದ ಪ್ರಥಮ ತಪಾಸಣೆ ವರದಿಯ ಮೇರೆಗೆ ದಿನಾಂಕ: 13-8-97ರಂದು ಹುಡುಗಿಯ ತಾಯಿ ಶ್ರೀಮತಿ ರತ್ನರವರು ಕುಂದಾಪುರ ಪೋಲೀಸ್ ಠಾಣೆಗೆ ದೂರು ಸಲ್ಲಿಸಿರುತ್ತಾರೆಂದು ವರದಿ ಮಾಡಿರುತ್ತಾರೆ. ಆದಾಗ್ಯೂ ಮಾಹಿತಿಯನ್ನು ತಿಳಿದ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ಕುಟುಂಬದ ಸದಸ್ಯರೊಡನೆ ಹಾಗೂ ಸ್ಥಳೀಯ ಪೋಲೀಸ್ ಅಧಿಕಾರಿಗಳೊಡನೆ ಚರ್ಚಿಸಿ, ತಪ್ಪಿತಸ್ಥರಿಗೆ ಶಿಕ್ಷೆಯನ್ನು ನೀಡುವುದು ಸೂಕ್ತವೆಂತಲೂ, ಇಂತಹ ಪ್ರಕರಣಗಳಿಗೆ ಕುಟುಂಬದವರು ಹುಡುಗಿಯ ಒಳ್ಳೆ ಭವಿಷ್ಯದ ಕಾರಣ ಹಿಂಜರಿಯಬಾರದೆಂದೂ ಕುಟುಂಬದವರ ಮನವೊಲಿಸಿ, ಅವರನ್ನು ಒಪ್ಪಿಸಿ ದಿನಾಂಕ: 13-8-97ರಂದು ಕುಂದಾಪುರ ಪೋಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುತ್ತಾರೆಂದು ವರದಿ ಮಾಡಿರುತ್ತಾರೆ. ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ ಮೇರೆಗೆ ಪೋಲೀಸರು ತಕ್ಷಣ ಕ್ರಮ ಕೈಗೊಂಡು ಆರೋಪಿಯನ್ನು ಪೋಲಿಸ್ ವಶಕ್ಕೆ ತೆಗೆದುಕೊಂಡು ನ್ಯಾಯಾಂಗ ಕಸ್ಟಡಿಯಲ್ಲಿಟ್ಟು ತನಿಖೆ ನಡೆಸುತ್ತಿದ್ದಾರೆ. ವಿದ್ಯಾರ್ಥಿನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕುಂದಾಪುರ ಗಿರಿಜನ ಆಶ್ರಮ ಶಾಲೆಯಲ್ಲಿ ಅಡಿಗೆ ಕಾರ್ಯನಿರ್ವಹಿಸುತ್ತಿದ್ದು ಶ್ರೀಮತಿ ಸುಶೀಲರವರನ್ನು ತಮ್ಮ ಕರ್ತವ್ಯದಲ್ಲಿ ಲೋಪ, ಬೇಜವಾಬ್ದಾರಿ ವರ್ತನೆ ಮತ್ತು ಅಶಿಸ್ತಿನಿಂದ ವರ್ತಿಸಿರುವುದಕ್ಕೆ ಹಾಗೂ ಕು: ವಿಶಾಲಳನ್ನು ವೈದ್ಯಾಧಿಕಾರಿಗಳು ತಪಾಸಣೆ ನಡೆಸಿ, ಇದು ಅತ್ಯಾಚಾರವೆಂದು ಖಚಿತಪಡಿಸಿಕೊಂಡ ನಂತರ ದಿನಾಂಕ: 16-8-97ರಂದು ವಿಚಾರಣೆಯನ್ನು ಕಾಯ್ದಿರಿಸಿ, ಶ್ರೀಮತಿ ಸುಶೀಲರವರನ್ನು ಸೇವೆಯಿಂದ ಅಮಾನತ್ತುಗೊಳಿಸಿರುವುದಾಗಿ ಸಹ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ವರದಿ ಮಾಡಿರುತ್ತಾರೆ.

ಈ ರೀತಿ ವರದಿ ಬಂದಿದೆ. ಆದರೂ ಸಹ ಇದರ ಗಂಭೀರತೆಯನ್ನು ನೋಡಿ ಇಲಾಖೆಯಿಂದ ಒಬ್ಬರು ದಕ್ಷ ಐ.ಎ.ಎಸ್.ಅಧಿಕಾರಿಯವರನ್ನು ನಿಯೋಜಿಸಿ ವಿಚಾರಣೆ ಮಾಡಿಸಿ ಮಾಹಿತಿಯನ್ನು ಪಡೆಯುತ್ತೇನೆ. ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವಾಗಿರುವ ನೇರವಾದ ಆಪಾದನೆ ಇರುವುದರಿಂದ ಆ ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ನೀಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

(1) ಕಾವೇರಿ ಡಿಸ್‌ಪ್ಯೂಟ್ ವಿಚಾರದಲ್ಲಿ ಅಬ್ಜಕ್ಷನ್ ಹಾಕಲು ಸುಪ್ರೀಮ್ ಕೋರ್ಟ್‌ನಿಂದ ಎರಡುವಾರ ಸಮಯ

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):ಮಾನ್ಯ ಉಪಾಧ್ಯಕ್ಷರೆ, ಬಹಳ ಮುಖ್ಯವಾದ ವಿಚಾರವೊಂದಿದೆ. ಮಾನ್ಯ ನಾಣಯ್ಯನವರು ಇಲ್ಲಿದ್ದಾರೆ. ಅವರ ಗಮನಕ್ಕೆ ಮತ್ತು ಮುಖ್ಯಮಂತ್ರಿಯವರ ಮತ್ತು ನೀರಾವರಿ ಸಚಿವರ ಗಮನಕ್ಕೆ ಈ ವಿಚಾರ ಬಂದಿದೆಯೆಂದು ತಿಳಿದುಕೊಂಡಿದ್ದೇನೆ. ಅದೇನೆಂದರೆ

"The Supreme Court has fixed a two-week deadline for the Kerala and Karnataka Governments to file thier objections on the centre's draft scheme regarding implementation of the Cauvery Water Dispute Tribunal's six-year old interim order.

The draft notification issued by the Centre envisages constituting the Cauvery River Authority to monitor Karnataka's implementation of the interim award. The State has already expressed its opposition to the notification.